

## ಮಿಂಚುತ್ತಿರುವ ತಾಪ್ಸೀ

ತಾಪ್ಸೀ ಪನ್ನು ಇದೀಗ ಬಾಲಿವುಡ್‌ನ ಹೊಸ ಆಕರ್ಷಣೆ. ಅನುಭವೀ ನಟ ರಿಷಿ ಕಪೂರ್ ಜತೆಗೆ ಈಕೆ ಸರಿಸಮನಾಗಿ ನಟಿಸಿರುವ 'ಮುಲ್ಕ್' ಚಿತ್ರ ದೇಶಾದ್ಯಂತ ಬಿಡುಗಡೆಯಾಗಿದ್ದು, ತಾಪ್ಸೀ ನಟನೆಯ ಬಗ್ಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಹೊಸ ತಲೆಮಾರಿನ ನಟಿಯರಲ್ಲಿ ಹೆಚ್ಚು ಸುಂದರಿಯೂ ಆಗಿರುವ ತಾಪ್ಸೀ, ಸದ್ಯಕ್ಕೆ ಬಾಲಿವುಡ್‌ನಲ್ಲಿ ತಳ ಊರಿರುವ ಕಾಜಲ್ ಅಗರ್‌ವಾಲ್‌ಗೂ ಸೆಡ್ಡು ಹೊಡೆದು ಹೊಸ ಹೊಸ ಅವಕಾಶಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದಾಳೆ.

ದಕ್ಷಿಣದಲ್ಲಿ ತೆಲುಗು, ತಮಿಳು, ಮಲಯಾಳಂ ಚಿತ್ರಗಳಲ್ಲಿ ನಟಿಸಿ ಮನೆಮಾತಾಗಿರುವ ತಾಪ್ಸೀ ಬಾಲಿವುಡ್‌ನ ಹೊಸ ತಲೆಮಾರಿನ ನಟಿಯರಲ್ಲಿ ಮುಂಚೂಣಿಯಲ್ಲಿದ್ದಾಳೆ. ಅಕ್ಷಯ್ ಕುಮಾರ್ ನಾಯಕನಾಗಿದ್ದ 'ಬೇಬಿ' ಚಿತ್ರದಲ್ಲಿ ಗೂಢಚಾರಿಣಿಯಾಗಿ ಸಣ್ಣ ಪಾತ್ರವೊಂದರಲ್ಲಿ ನಟಿಸಿ ಎಲ್ಲರ ಮನ ಗೆದ್ದಿದ್ದ ತಾಪ್ಸೀ ಆ ಬಳಿಕ ಒಂದೇ ಸಮನೆ ಬಾಲಿವುಡ್‌ನಲ್ಲಿ ಅವಕಾಶಗಳನ್ನು ಪಡೆಯುತ್ತಿದ್ದಾಳೆ.

ಆದರೆ ಬೇರೆ ನಟಿಯರಂತೆ ಸಿಕ್ಕ ಅವಕಾಶಗಳನ್ನೆಲ್ಲ ಬಾಚಿಕೊಳ್ಳುವ ಬದಲು, ಅತ್ಯುತ್ತಮ ನಟನೆಯ ಅವಕಾಶ ಇರುವ ಪಾತ್ರಗಳನ್ನಷ್ಟೇ ಆಯ್ಕೆ ಮಾಡಿಕೊಳ್ಳುವ ಮೂಲಕ ತಾಪ್ಸೀ ತಾನು ಬುದ್ಧಿವಂತೆಯೂ ಹೌದು ಎಂದು ತೋರಿಸಿಕೊಟ್ಟಿದ್ದಾಳೆ. ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಈಕೆ, ಮೊದಲು ಮಾಡೆಲಿಂಗ್‌ನಲ್ಲಿ ಮಿಂಚಿ ಬಳಿಕ ಚಿತ್ರರಂಗಕ್ಕೆ ಕಾಲಿಟ್ಟವಳು. 'ಮುಲ್ಕ್' ಚಿತ್ರದಲ್ಲಿ ಈಕೆಯ ನಟನೆ ಬಾಲಿವುಡ್‌ನ 'ಖಾನ್'ದಾನ್ ಹೀರೋಗಳ ಗಮನವನ್ನೂ ಸೆಳೆದಿದೆಯಂತೆ.

## ಮತ್ತೆ ಬಂದ ಕಮಲ್

ರಾಜಕೀಯದಲ್ಲಿ ಸುದ್ದಿ ಮಾಡುತ್ತಿದ್ದ ಕಮಲಹಾಸನ್ ಇದೀಗ ಮತ್ತೆ ಬೆಳ್ಳಿತೆರೆಗೆ ದಾಳಿ ಇಟ್ಟಿದ್ದಾರೆ. ಕಮಲ್ ಅಭಿನಯದ 'ವಿಶ್ವರೂಪಂ 2' ಮೇಲೆ ಅಭಿಮಾನಿಗಳು ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದಾರೆ. 'ವಿಶ್ವರೂಪಂ' ಮೊದಲ ಭಾಗದಂತೆಯೇ ಈ ಚಿತ್ರವೂ ಆ್ಯಕ್ಷನ್‌ಪ್ರಿಯರನ್ನು ರಂಜಿಸುವುದು ಖಚಿತ. ಹೊಸ ಚಿತ್ರದಲ್ಲಿ ಕಮಲ ಹಾಸನ್‌ನ ಡೈಲಾಗ್‌ಗಳು ಈಗಾಗಲೆ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಜನಪ್ರಿಯವಾಗಿವೆ. 'ವಿಶ್ವರೂಪಂ' ಮೊದಲ ಚಿತ್ರ 2013ರಲ್ಲಿ ಬಿಡುಗಡೆಯಾಗಿದ್ದರೂ ಪ್ರೇಕ್ಷಕರು ಈಗಲೂ ಆ ಚಿತ್ರದ ಅದ್ಭುತ ದೃಶ್ಯಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದಾರೆ. ಅದರಲ್ಲಿ ಭಾರತದ ಗೂಢಚರ್ಯೆ ಏಜೆನ್ಸಿ 'ರಾ'ದ ಅಧಿಕಾರಿಯಾಗಿ ನಟಿಸಿದ್ದ ಕಮಲ್, ಅದೇ ಪಾತ್ರವನ್ನು ಎರಡನೇ ಭಾಗದಲ್ಲೂ ಮುಂದುವರಿಸಿದ್ದಾರೆ.

'ಗೂಢಚರ್ಯೆಯ ಚಿತ್ರಗಳೆಂದರೆ ನನಗೆ ತುಂಬ ಇಷ್ಟ. ನಮ್ಮ ಕುಟುಂಬದಲ್ಲಿ ಸೋದರಮಾವ ಒಬ್ಬರು ಪೊಲೀಸ್ ಇಲಾಖೆಯಲ್ಲಿದ್ದು ಬಳಿಕ ಗೂಢಚರ್ಯೆ ಇಲಾಖೆಗೆ ಸೇರಿದ್ದರು. ಅವರು ಹೇಳುತ್ತಿದ್ದ ಗೂಢಚಾರರ ಕಥೆಗಳನ್ನು ಕೇಳಿ ನಾನು ಯೌವನದಲ್ಲೇ ಪ್ರಭಾವಿತನಾಗಿದ್ದೆ. ಈ ನೈಜ ಕಥೆಗಳ ಮುಂದೆ ಜೇಮ್ಸ್ ಬಾಂಡ್ ಸಿನಿಮಾಗಳ ಗೂಢಚರ್ಯೆ ಕಥೆಗಳು ಏನೇನೂ ಅಲ್ಲ. ನನ್ನ ಹೊಸ ಸಿನಿಮಾಗಳಲ್ಲೂ ಸಾಕಷ್ಟು ನೈಜತೆಯನ್ನು ತರಲು ಯತ್ನಿಸಿದ್ದೇನೆ' ಎಂದಿದ್ದಾರೆ ಚಿತ್ರದ ನಿರ್ದೇಶಕರೂ ಆಗಿರುವ ಕಮಲ್.

'ವಿಶ್ವರೂಪಂ 2' ಚಿತ್ರವನ್ನು ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಏಕಕಾಲಕ್ಕೆ ಶೂಟಿಂಗ್ ಮಾಡಲಾಗಿದೆ. ತೆಲುಗಿಗೆ ಡಬ್ ಆಗಿದೆ. ಈ ಚಿತ್ರದ ಹಿಂದಿ ಅವತರಣಿಕೆಯನ್ನು ರೋಹಿತ್ ಶೆಟ್ಟಿ ಪ್ರಸ್ತುತ ಪಡಿಸಲಿದ್ದಾರೆ. 2013ರಲ್ಲಿ 'ವಿಶ್ವರೂಪಂ' 95 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿದ್ದು, ಬಾಕ್ಸಾಫೀಸ್‌ನಲ್ಲಿ 200 ಕೋಟಿ ರೂಪಾಯಿ ಕಲೆಕ್ಷನ್ ಮಾಡಿತ್ತು. ಈಗ ಎರಡನೇ ಭಾಗ ಆ ದಾಖಲೆಯನ್ನು ಮುರಿಯುತ್ತದೋ ನೋಡಬೇಕು.

■ ಬಿಂದು

